**SC No. 205/2022**
**PW-11**

ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆಃ 57)<br>ನಮೂನೆ ಸಂಖ್ಯೆಃ 4 |

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.

ಎಸ್.ಸಿ ನಂಃ 205/2022

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಡಾ. ಎಚ್.ವಿ. ಕವಿತಾ | ಪ್ರಾಸಾಃ 11 |
| ಗಂಡನ ಹೆಸರು | :: | ಸಂಜಯ ಬಿ. ಕೊಣ್ಣೂರ | ಹೆಚ್ಚುವರಿ ಸಾಕ್ಷಿ |
| ಪ್ರಾಯ | : | 53 ವರ್ಷ | ದಿನಾಂಕ 03.09.2025 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ವಿಶೇಷ ತಜ್ಞರು, ಕಲಘಟಗಿ ಸಾರ್ವಜನಿಕ ಆಸ್ಪತ್ರೆ | |
| ವಾಸಸ್ಥಳ | : | ಕಲಘಟಗಿ. | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನಾನು 2010 ರಿಂದ ದಿನಾಂಕ 10.07.2025 ರವರೆಗೆ ಸಾರ್ವಜನಿಕ ಆಸ್ಪತ್ರೆ ಸವದತ್ತಿಯಲ್ಲಿ ತಜ್ಞ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ. ದಿನಾಂಕ 18.08.2022 ರಂದು ರಾತ್ರಿ 09.00 ಗಂಟೆ ಸಮಯದಲ್ಲಿ ಸವದತ್ತಿ ಪೋಲಿಸ ಠಾಣೆಯಿಂದ ಶಬಾನಾ ಮೆಹಬೂಬಸಾಬ್ ಗೋರನವನಕೊಳ್ಳ ಎನ್ನುವ ಮಹಿಳೆಯ ಶವದ ಮರಣೋತ್ತರ ಪರೀಕ್ಷೆಗಾಗಿ ಡಬ್ಲ್ಯೂ.ಪಿ.ಸಿ. 3550 ಸರಸ್ವತಿ ಹಂಪನ್ನವರ (ಚಾಸಾ-29) ಇವರ ಮೂಲಕ ಕೋರಿಕೆ ಪತ್ರ ಬಂದಿರುತ್ತದೆ. ಸದರಿ ಕೋರಿಕೆ ಪತ್ರದಂತೆ ನಮ್ಮ ಆಸ್ಪತ್ರೆಯಲ್ಲಿ ಈ ಮೇಲೆ ಹೇಳಿದ ಮಹಿಳೆಯ ಮರಣೋತ್ತರ ಪರೀಕ್ಷೆಯನ್ನು ರಾತ್ರಿ 09.00 ರಿಂದ 10.45 ಗಂಟೆಯ ಸಮಯದಲ್ಲಿ ಮಾಡಿರುತ್ತೇನೆ.

**SC No. 205/2022**
**PW-11**

**2.** ಪರೀಕ್ಷೆಯ ಸಂದರ್ಭದಲ್ಲಿ ಸದರಿ ಶವದ ಮೈಮೇಲೆ ಈ ಕೆಳಗೆ ಹೇಳಿದ ಗಾಯಗಳು ಕಂಡುಬಂದಿರುತ್ತವೆ:

**1.** ಕತ್ತಿನ ಮೇಲ್ಭಾಗ 7 ಇಂಚು ಉದ್ದ ಮತ್ತು 1 ½ ಇಂಚಿನ ಅಗಲದ ಆಳವಾದ ಹರಿದ ಗಾಯ, ಸದರಿ ಗಾಯದಲ್ಲಿ ಅನ್ನನಾಳ, ಶ್ವಾಸನಾಳ, ಮುಖ್ಯವಾದ ರಕ್ತನಾಳಗಳು ತುಂಡಾಗಿದ್ದವು.

2. ಹೊಟ್ಟೆಯ ಮೇಲ್ಭಾಗ ಬಲಬದಿಯಲ್ಲಿ ಸುಮಾರು 2 ಇಂಚು ಉದ್ದ ಮತ್ತು 1 ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.

**3.** ಬಲಪಕ್ಕೆಲುಬಿನ ಕೆಳಗಿನ ಭಾಗದಲ್ಲಿ 2 ಇಂಚು ಉದ್ದ ಮತ್ತು ½ ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.

4. ಬಲಮುಂಗೈಯ ಬಲಭಾಗದಲ್ಲಿ ಮುಂದಿನ ಭಾಗದಲ್ಲಿ 3 ಇಂಚು ಉದ್ದ ಮತ್ತು 1 ಇಂಚು ಅಗಲದ ಆಳವಾದ ಹರಿದ ಗಾಯ ಇತ್ತು.

**5.** ಈ ಮೇಲೆ ಹೇಳಿದ ನಾಲ್ಕನೇ ಗಾಯದ ಮೇಲ್ಭಾಗದಲ್ಲಿ 1 ½ ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.

6. ಬಲ ಮುಂಗೈಯಲ್ಲಿ 2 ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು.

**7.** ಬಲಮಣಿಕಟ್ಟಿನ ಮೇಲ್ಭಾಗದಲ್ಲಿ 1 ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.

8. ಎಡ ಅಂಗೈಯಲ್ಲಿ 1 ½ ಇಂಚು ಉದ್ದ ಮತ್ತು ½ ಇಂಚು ಅಗಲದ ಹರಿದ ಗಾಯ ಇತ್ತು.

**9.** ಎಡಮುಂಗೈಯ ಹೊರಭಾಗದಲ್ಲಿ 2 ½ ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು.

**10.** ಬಲತೊಡೆಯಲ್ಲಿ 2 ಇಂಚು ಉದ್ದ ಮತ್ತು 1 ಇಂಚು ಅಗಲದ ಹರಿದ ಗಾಯ ಇತ್ತು ಮತ್ತು

11. ಬಲಭುಜದಲ್ಲಿ 1 ½ ಇಂಚು ಉದ್ದ ಮತ್ತು 2 ಸೆಂಟಿಮೀಟರ ಅಗಲದ ಹರಿದ ಗಾಯ ಇತ್ತು.

3. ತಲೆಬುರುಡೆ ಮತ್ತು ಮಿದುಳು ಸುಸ್ಥಿತಿಯಲ್ಲಿದ್ದವು. ಪಕ್ಕೆಲುಬಿನ ಗೋಡೆಯಲ್ಲಿ ಈ ಮೇಲೆ ಹೇಳಿದ ಮೂರನೇ ಗಾಯ ಕಂಡುಬಂದಿರುತ್ತದೆ. ಶ್ವಾಸನಾಳ ತುಂಡಾಗಿತ್ತು. ಬಲಶ್ವಾಸಕೋಶದಲ್ಲಿ ಗಾಯ ಕಂಡುಬಂದಿರುತ್ತದೆ. ಹೃದಯ ಭಾಗ ಸುಸ್ಥಿತಿಯಲ್ಲಿತ್ತು. ಅಪಧಮನಿ ಮತ್ತು ಅಭಿಧಮನಿ ನಾಳಗಳು ತುಂಡಾಗಿದ್ದವು. ಈ ಮೇಲೆ ಹೇಳಿರುವ ಎರಡನೇ ಗಾಯ ಹೊಟ್ಟೆಯ ಒಳಭಾಗದಲ್ಲಿ ಕಂಡುಬಂದಿರುತ್ತದೆ. ಈ ಮೇಲೆ ಹೇಳಿದ ನಾಲ್ಕನೇ ಗಾಯಕ್ಕೆ ಅನುಗುಣವಾಗಿ ಹೊಟ್ಟೆಯ ಮೇಲ್ಭಾಗದಲ್ಲಿ ಗಾಯ ಇತ್ತು. ಅನ್ನನಾಳ ತುಂಡಾಗಿತ್ತು. ಜಠರ ಸುಸ್ಥಿತಿಯಲ್ಲಿತ್ತು. ದೊಡ್ಡಕರುಳಿಗೆ ಗಾಯವಾಗಿತ್ತು. ಕಿಡ್ನಿ ಮತ್ತು ಬ್ಲಾಡರ ಸುಸ್ಥಿತಿಯಲ್ಲಿತ್ತು. ಗುಲ್ಮ ಮತ್ತು ಪಿತ್ತಕೋಶ ಸುಸ್ಥಿತಿಯಲ್ಲಿದ್ದವು. ದೇಹದ ಮೇಲೆ ಕಂಡುಬಂದಿದ್ದ ಗಾಯಗಳು ಮರಣಪೂರ್ವದ ಗಾಯಗಳಾಗಿದ್ದವು. ಮೃತಳ ಸಾವು ನಾನು ಪರೀಕ್ಷೆ ಮಾಡಿರುವುದಕ್ಕಿಂತ ಹಿಂದೆ ಸುಮಾರು 12-24 ಗಂಟೆಗಳ ಒಳಗೆ ಆಗಿರುವ ಸಾಧ್ಯತೆ ಇತ್ತು. ದೇಹದ ಎಲ್ಲಾ ಭಾಗಗಳು ಸೆಟೆದುಕೊಂಡಿತ್ತು.

4. ನನ್ನ ಅಭಿಪ್ರಾಯದಲ್ಲಿ ಮೃತಳ ಸಾವು ಆಕೆಯ ಮುಖ್ಯ ಅಂಗಗಳಿಗೆ ಆಗಿದ್ದ ಈ ಮೇಲೆ ಹೇಳಿರುವ ಗಾಯಗಳ ದೆಸೆಯಿಂದ ಆಘಾತ ಮತ್ತು ರಕ್ತಸ್ರಾವದಿಂದ ಆಗಿರುವ ಸಾಧ್ಯತೆ ಇರುತ್ತದೆ. ಶವವನ್ನು ಪರೀಕ್ಷೆ ಮಾಡಿದ ಬಗ್ಗೆ ನಾನು ಮರಣೋತ್ತರ ಶವ ಪರೀಕ್ಷಾ ವರದಿಯನ್ನು ನೀಡಿರುತ್ತೇನೆ. ಈಗ ತೋರಿಸಿದ ದಾಖಲೆ ಸದರಿ ಶವ ಪರೀಕ್ಷಾ ವರದಿಯಾಗಿದ್ದು, ಅದನ್ನು ನಿಪಿ-39 ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-39(ಎ) ಎಂದು ಗುರುತಿಸಲಾಯಿತು.

5. ಶವದ ಮೇಲ್ಭಾಗದಲ್ಲಿ ರಕ್ತವಾಗಿದ್ದ ಬಿಳಿ ದುಪ್ಪಟ್ಟಾ, ತಿಳಿಗುಲಾಬಿ ಬಣ್ಣದ ಬ್ರಾ, ನೇರಳೆ ಬಣ್ಣದ ಹೂವಿನ ಡಿಜೈನ ಇದ್ದ ಪ್ರಿಂಟೆಡ್ ನೈಟಿ, ನೀಲಿ ಬಣ್ಣದ

ಪೆಟಿಕೋಟ್, ಕಂದುಬಣ್ಣದ ಅಂಡರವೆರ್ ಇದ್ದವು. ಸದರಿ ಬಟ್ಟೆಗಳನ್ನು ಸಂಗ್ರಹಿಸಿ ಪ್ಯಾಕ್ ಮಾಡಿ ಸೀಲ್ ಮಾಡಿ ಈ ಮೇಲೆ ಹೇಳಿರುವ ಮಹಿಳಾ ಸಿಬ್ಬಂದಿಯವರ ಮೂಲಕ ತನಿಖಾಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ.

6. ಮೃತಳ ರಕ್ತದ ಗುಂಪನ್ನು ಪರೀಕ್ಷಿಸಿ ಈ ಬಗ್ಗೆ ತನಿಖಾಧಿಕಾರಿಯವರಿಗೆ ವರದಿ ಮಾಡಿರುತ್ತೇನೆ. ಮೃತಳ ರಕ್ತದ ಗುಂಪು AB+ ಆಗಿತ್ತು. ಈಗ ತೋರಿಸಿದ ದಾಖಲೆಯು ನಾನು ತನಿಖಾಧಿಕಾರಿಯವರಿಗೆ ನೀಡಿರುವ ಮೃತಳ ರಕ್ತದ ಗುಂಪಿನ ವರದಿಯಾಗಿದ್ದು, ಅದನ್ನು ನಿಪಿ-40 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-40(ಎ) ಎಂದು ಗುರುತಿಸಲಾಯಿತು. ಮರಣೋತ್ತರ ಪರೀಕ್ಷೆಯ ನಂತರ ಶವವನ್ನು ಮೃತಳ ವಾರಸುದಾರರಿಗೆ ನೀಡುವ ಬಗ್ಗೆ ಪೋಲಿಸ ಸಿಬ್ಬಂದಿಯವರ ವಶಕ್ಕೆ ನೀಡಿರುತ್ತೇನೆ.

7. ನಂತರ ದಿನಾಂಕ 20.03.2023 ರಂದು ಈ ಕೇಸಗೆ ಸಂಬಂಧಪಟ್ಟಂತೆ ತನಿಖಾಧಿಕಾರಿಯವರು ಪೋಲಿಸ ಸಿಬ್ಬಂದಿ ಎಚ್ ಸಿ 2775 ಇವರ ಮೂಲಕ ಒಂದು ಚಾಕುವನ್ನು ಕಳುಹಿಸಿಕೊಟ್ಟು ಅದನ್ನು ಪರಿಶೀಲನೆ ಮಾಡಿ ಅಭಿಪ್ರಾಯ ನೀಡುವಂತೆ ಕೋರಿದ್ದರು. ಸದರಿ ಚಾಕುವನ್ನು ನಾನು ಪರೀಕ್ಷೆ ಮಾಡಿದ್ದು, ಅದರ ಉದ್ದ 1 ಅಡಿ 2 ಸೆಂಟಿಮೀಟರ ಇತ್ತು. ಅದರ ಹಿಡಿಕೆ 5 ಇಂಚು ಉದ್ದ ಇತ್ತು. ಹಿಡಿಕೆಯ ಭಾಗದಲ್ಲಿ ಚಾಕುವಿನ ಅಗಲ 3 ಇಂಚು ಇತ್ತು ಮತ್ತು ತುದಿಯ ಭಾಗದಲ್ಲಿ 1 ½ ಸೆಂಟಿಮೀಟರ ಅಗಲ ಇತ್ತು. ಸದರಿ ಚಾಕುವಿನ ಮೇಲೆ ರಕ್ತದ ಕಲೆಗಳು ಇದ್ದವು.

8. ಮರಣೋತ್ತರ ಶವ ಪರೀಕ್ಷಾ ವರದಿಯಲ್ಲಿ ಹೇಳಿರುವ ಗಾಯಗಳು ಈ ಮೇಲೆ ಹೇಳಿರುವ ಚಾಕುವಿನಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆಗಳು ಇವೆ ಎಂದು ನಾನು ಲಿಖಿತವಾಗಿ ಅಭಿಪ್ರಾಯ ನೀಡಿರುತ್ತೇನೆ. ಈಗ ತೋರಿಸಿದ ದಾಖಲೆಯು ಚಾಕುವನ್ನು ಪರೀಕ್ಷೆ ಮಾಡಿ ವರದಿ ನೀಡುವಂತೆ ತನಿಖಾಧಿಕಾರಿಯವರು ನೀಡಿರುವ ಕೋರಿಕೆ ಪತ್ರವಾಗಿದ್ದು, ಅದನ್ನು ಸ್ವೀಕರಿಸಿದ ಬಗ್ಗೆ ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪತ್ರವನ್ನು ನಿಪಿ-41 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-41(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ ದಾಖಲೆಯನ್ನು ನಾನು ಚಾಕುವನ್ನು ಪರೀಕ್ಷೆ ಮಾಡಿ ನೀಡಿರುವ ಅಭಿಪ್ರಾಯ ಪತ್ರವಾಗಿದ್ದು, ಅದನ್ನು ನಿಪಿ-42 ಎಂದು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ನಿಪಿ-42(ಎ) ಎಂದು ಗುರುತಿಸಲಾಯಿತು. ಸದರಿ ಚಾಕುವನ್ನು ಈಗ ನಾನು ನೋಡಿದರೆ ಗುರುತಿಸಬಲ್ಲೆ. ಈಗ ತೋರಿಸಿದ ಮುಮಾ-7 ವಸ್ತು ಸದರಿ ಚಾಕು ಆಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರವಾಗಿಃ ಶ್ರೀ ಪಿ ಜೆ ಜಿ ವಕೀಲರಿಂದ (ಡಿ ಎಲ್ ಎಸ್ ಎ ಪರವಾಗಿ)ಃ

9. ಶವದ ಮರಣೋತ್ತರ ಪರೀಕ್ಷೆ ಮಾಡುವ ಬಗ್ಗೆ ತನಿಖಾಧಿಕಾರಿಯವರಿಂದ ನೇರವಾಗಿ ನನಗೆ ಬಂದಿತ್ತು. ಮೃತ ದೇಹವು ಶೆಟೆದಿದ್ದರೇ ದೇಹದ ಮೇಲೆ ಕಂಡುಬರುವ ಗಾಯಗಳ ಅಳತೆಯನ್ನು ಸರಿಯಾಗಿ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಚೂಪಾದ ಅಂಚು ಇರುವ ವಸ್ತುವಿನ ಮೇಲೆ ಬಿದ್ದರೆ ಈ ಮೇಲೆ ಹೇಳಿರುವ 1 ರಿಂದ 11 ನೇ ರೀತಿಯ ಗಾಯಗಳಾಗುವ ಸಾಧ್ಯತೆ ಇದೆ ಎಂದರೆ ಸರಿ. ಆದರೆ ಸದರಿ ಗಾಯಗಳು ಆ ಸಂದರ್ಭದಲ್ಲಿ ಏಕಕಾಲದಲ್ಲಿ ಆಗುವ ಸಾಧ್ಯತೆ ಇಲ್ಲ. ಮರಣೋತ್ತರ ಪರೀಕ್ಷೆ ವರದಿಯಲ್ಲಿ ನಾನು ಗಾಯಗಳ ಅವಧಿಯನ್ನು ಹೇಳಿಲ್ಲ ಎಂದರೆ ಸರಿ. ಆದರೆ ಸದರಿ ಗಾಯಗಳು ತಾಜಾ ಗಾಯಗಳಾಗಿದ್ದವು.

10. ಚಾಕುವನ್ನು ನನಗೆ ಕಳುಹಿಸಿಕೊಡುವಾಗ ಅದನ್ನು ಪ್ಯಾಕ್ ಮಾಡಿ ಕಳುಹಿಸಿದ್ದರು. ಚಾಕುವಿನ ಮೇಲೆ ಕಂಡುಬಂದ ರಕ್ತದ ಕಲೆಗಳು ಯಾವ ಗುಂಪಿಗೆ ಸೇರಿದ ರಕ್ತ ಎಂಬುದನ್ನು ನಾನು ನಿಪಿ-42 ವರದಿಯಲ್ಲಿ ಹೇಳಿಲ್ಲ. ಚಾಕುವಿನ ಮೇಲೆ ಕಂಡುಬಂದಿರುವ ರಕ್ತವು ಮೃತಳ ರಕ್ತ ಎಂದು ನನಗೆ ಹೇಳಲು ಸಾಧ್ಯವಿಲ್ಲ. ಚಾಕುವಿನ ಉದ್ದ ಹಿಡಿಕೆ ಸೇರಿ 1 ಅಡಿ 2 ಸೆಂಟಿಮೀಟರ ಇತ್ತು. ಚಾಕುವಿನ ಅಳತೆಯನ್ನು ನಾನೇ ಪರಿಶೀಲಿಸಿ ನೋಡಿರುತ್ತೇನೆ.

11. ಮುಮಾ-7 ಚಾಕುವಿನಿಂದ ಶವ ಪರೀಕ್ಷಾ ವರದಿಯಲ್ಲಿ ಹೇಳಿರುವ ಯಾವುದೇ ಗಾಯಗಳು ಆಗುವ ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಮೃತದೇಹವನ್ನು ಪರೀಕ್ಷೆ ಮಾಡಿಲ್ಲ ಮತ್ತು ಮೃತ ದೇಹದ ಮೇಲೆ ಆ ರೀತಿಯ ಯಾವುದೇ ಗಾಯಗಳು ಕಂಡುಬಂದಿಲ್ಲ ಎಂದರೆ ಸರಿಯಲ್ಲ.ತನಿಖಾಧಿಕಾರಿಯವರ ಮಾತು ಕೇಳಿಕೊಂಡು ಈ ಕೇಸಗೆ ಅನುಕೂಲವಾಗುವ ರೀತಿಯಲ್ಲಿ ನಿಪಿ-39 ಮತ್ತು ನಿಪಿ-42 ರಂತೆ ಸುಳ್ಳು ವರದಿಗಳನ್ನು ನೀಡಿ ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ

ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ,

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.